CENTRAL AID FOR PROJECTS IN CAUVERY BASIN

351 SRI H. D. DEVE GOWDA (Holenarasipur).—Will the Minister of State for Major Irrigation be pleased to state :—

the amount received from the Central Government for Major and Medium Irrigation projects in Cauvery Basin details in respect of each project may be furnished) ?

SRI H N. NANJEGOWDA (Minister of State for Major Irrigation).—

No financial aid has been received from the Central Government.

ಶ್ರೀ ಎಚ್. ಡಿ. ದೇವೇಗೌಡ.—ತಾವು ಕೇಂದ್ರದಿಂದ ಹಣ ಕೇಳಲ್ಲಿಲ್ಲವೇ ; ಏಕೆ ಹಣ ಅಲ್ಲಿಂದ ಬಂದಿಲ್ಲ ?

† ಎಚ್. ಎನ್. ನಂಜೇಗೌಡ.—ಪ್ಲಾನ್ ಅಲೊಕೇಷನಿನಲ್ಲಿ ಅಪ್ರೂವ್ಡ್ ಪ್ಲಾನ್ಸ್ ಮಾತ್ರ ಹಾಕಬೇಕಾಗುತ್ತದೆ. ಅನ್ ಅಪ್ರೂವ್ಡ್ ಪ್ಲಾನ್ ಹಾಕುವುದಕ್ಕೆ ಸಾಧ್ಯವಿಲ್ಲ. ಇದನ್ನೆಲ್ಲಾ ರಾಜ್ಯ ಸರ್ಕಾರದವರು ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇದು ರಾಜ್ಯಸರ್ಕಾರಕ್ಕೆ ಹೊರೆಯಾಗುವುದಿಲ್ಲವೇ ? ಏಕೆಂದರೆ ಕಾವೇರಿ ಬೇಸಿನ್‌ನಲ್ಲಿರತಕ್ಕಂತಹ ಪ್ರೊಜೆಕ್ಟುಗಳಿಗೆ ಕೇಂದ್ರ ಸರ್ಕಾರ ಹಣ ಕೊಡಲಿಲ್ಲ ವೆಂದು ರಾಜ್ಯಸರ್ಕಾರ ಖರ್ಚು ಮಾಡಿದರೆ ಬೇರೆ ಡೆವಲಿಪ್‌ಮೆಂಟಲ್ ಕಾರ್ಯಕ್ರಮಗಳಿಗೆ ತೊಂದರೆಯಾಗುವುದಿಲ್ಲವೇ ? ಅದ್ದರಿಂದ ತಾವು ಕೇಂದ್ರಸರ್ಕಾರಕ್ಕೆ ಒತ್ತಾಯ ಮಾಡಿ ಹಣ ತರುವುದಕ್ಕೆ ಇರತಕ್ಕ ಕಷ್ಟವಾದರೂ ಏನು ?

ಶ್ರೀ ಎಚ್. ಎನ್. ನಂಜೇಗೌಡ.—ಅವರು ಪ್ರೊಜೆಕ್ಟ್ ಅಪ್ರೂವ್ ಮಾಡದೆ ಹಣ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಪ್ರೊಜೆಕ್ಟುಗಳನ್ನು ಅಪ್ರೂವ್ ಮಾಡಿಲ್ಲ ಎಂಬುದು ಅವರಿಗೆ ಗೊತ್ತಿದೆ. ಅದಕ್ಕಾಗಿ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ನೇಮಕ ಮಾಡಿ, ಅವರು ವರದಿಯನ್ನು ಸಹ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದಾರೆಂದು ಗೊತ್ತಾಗಿದೆ. ಬಹುಶಃ ಬೇಗನೇ ಸಂಬಂಧಪಟ್ಟ ಮಂತ್ರಿಯವರನ್ನು ಕರೆದು ಮಾತನಾಡಿ, ಈ ಸಮಸ್ಯೆ ಬಗೆಹರಿಸಿ, ಕ್ಲಿಯರೆನ್ಸ್ ಕೊಡುವುದಕ್ಕೆ ಅವಕಾಶವಾಗುತ್ತದೆ. ಅಂತೂ ಕ್ಲಿಯರೆನ್ಸ್ ಕೊಡಿ ಎಂದು ತ್ಯಾಯಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಮಾತನಾಡುತ್ತಾ ಅಪ್ರೂವ್ಡ್ ಅಂಡ್ ಅನ್ ಅಪ್ರೂವ್ಡ್ ಪ್ರೊಜೆಕ್ಟ್ಸ್ ಎಂದು ಹೇಳಿದ್ದೀರಿ. ಅಂದರೆ ನಿಮ್ಮಿಂದ ಅಪ್ರೂವ್ ಆಗಿ ಅವರಿಂದ ಆಗದಿದ್ದರೆ ಅಂತಹವುಗಳಂ ಅನ್ ಅಪ್ರೂವ್ಡ್ ಪ್ರೊಜೆಕ್ಟ್‌ಗಳೇ ? ಮತ್ತು ನೀವು ಅಪ್ರೂವ್ ಮಾಡಿದವುಗಳಿಗೆ ಎಷ್ಟು ಹಣ ಕೇಳಿದ್ದೀರಿ ?

ಶ್ರೀ ಎಚ್. ಎನ್. ನಂಜೆಗೌಡ.—ಒಟ್ಟು ಎಷ್ಟು ಹಣ ಎಂದು ರಾಜ್ಯಸರ್ಕಾರಕ್ಕೆ ಕೊಡಂತ್ತಾರೆ. ನಾವು ಆದನ್ನು ಯಾವುದು ಅಪ್ರೂವ್ಡ್ ಪ್ರೊಜೆಕ್ಟುಗಳು ಇರುತ್ತವೆ, ಅವುಗಳಿಗೆ ಹಂಚಿಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ರಾಜ್ಯಸರ್ಕಾರದ ಖರ್ಚಿನಿಂದ ಮಾಡಬೇಕಾಗುತ್ತದೆ. ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ತಾಂತ್ರಿಕ ಮಂಜುರಾತಿ ದೊರೆಯದಿದ್ದರೆ ಹಣ ಕೊಡುವುದ ಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ನಮ್ಮ ವಟ್ಟಹೊಳೆ ಪ್ರೊಜೆಕ್ಟ್‌ಗೆ ತಾಂತ್ರಿಕ ಮಂಜೂರಾತಿ ಬಂದಿದೆ. ಆದ್ದರಿಂದ ಆದಕ್ಕೆ ಈ ಸಾರಿಯಾದರೂ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಸ್. ನಂಜೇಗೌಡ.—ಆದದ್ದು ಕೂಡ ತೆಗೆದಕೊಳ್ಳಬೇಕೆಂದು ಸರ್ಕಾರದ ಆಲೋಚನೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಫ್ಲಾಕ್ಟ್ ಫೈಂಡಿಂಗ್ ಕಮಿಟಿ ವರದಿ ಕೊಟ್ಟಿದೆ. ಅವರ ದಿಯ ಆಧಾರದ ಮೇಲೆ ಅಂತಿಮವಾಗಿ ನಿರ್ಣಯ ತೆಗೆದುಕೊಳ್ಳತಕ್ಕವರು ಯಾರು ?

ಶ್ರೀ ಎಚ್. ಎನ್. ನಂಜೇಗೌಡ.—ನಿರ್ಣಯ ಆದರೆ, ಎಲ್ಲಾ ರಾಜ್ಯಗಳಿಗೆ ಸಂಬಂಧಪಟ್ಟ ಮೂರು ರಾಜ್ಯ ಸರ್ಕಾರಗಳೂ ಒಪ್ಪಿ, ನಿರ್ಣಯ ತೆಗೆದುಕೊಳ್ಳಬೇಕು. ಅದು ಆಗಲಿಲ್ಲವಾದರೆ, ಕಾನೂನು ಪ್ರಕಾರ ನೋಡಬೇಕಾಗುತ್ತದೆ. ನಮ್ಮ ಮೇಲೆ ಕುಳಿತುಕೊಂಡು ನಿರ್ಣಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ ಈ ಪರಿಸ್ಥಿತಿ ಹೀಗೆಯೇ ಇದೆ ಎಂದು ನೀವು ತೀರ್ಮಾನಕ್ಕೆ ಬರಲು ಕಾರಣವೇನು ?

ಶ್ರೀ ಎಚ್. ಎನ್. ನಂಜೇಗೌಡ —ಅವಷ್ಟು ಜಾಗ್ರತೆಯಾಗಿ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದೇನೆ ಅಷ್ಟೆ. ಹೀಗೆಯೇ ಆಗುತ್ತದೆಂದು ಹೇಳಲು ನನಗೆ ಜ್ಯೋತಿಷ್ಯ ಗೊತ್ತಿಲ್ಲ.

MISAPPROPRIATION OF FUNDS IN KINNAL WEAVERS CO OPERATIVE SOCIETY

378. SRI K. VIRUPAKSHAPPA (Koppal).—

Will the Minister for Co-operation be pleased to state :—

(*a*) Whether it has come to the notice of Government that a huge amount has been misappropriated in Weavers Co-operative Society, Ltd., Kinnal, Taluk Koppal, Raichur District ;

(*b*) if so, the Extent of amount misappropriated ;

(*c*) the action taken against the persons involved in misappropriation ?

SRI A. SHANKARA ALVA (Minister for Co-operation).—

(*a*) Yes.

(*b*) Rs. 12,329-79.

(*c*) Action on criminal and civil sides has been initiated.

ಶ್ರೀ ಎಂ. ವಿರುಪಾಕ್ಷಪ್ಪ.—ಇದರಲ್ಲಿ ೨೨,೩೨೯-೭೯ ರೂಪಾಯಿ ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಯಾವ್ಯಾವ ವ್ಯಕ್ತಿಗಳು ಸೇರಿದ್ದಾರೆ ಮತ್ತು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೀರಾ ; ಹಾಕಿದ್ದರೆ ಅದು ಯಾವ ಸ್ಟೇಜಿನಲ್ಲಿ ಇದೆ ?

† ಶ್ರೀ ಎ. ಶಂಕರ ಆಳ್ವ —ಈ ಸೊಸೈಟಿಯಲ್ಲಿ ೨೨,೩೨೯-೭೯ ರೂಪಾಯಿ ದುರುಪಯೋಗವಾಗಿದೆ. ಅದರಲ್ಲಿ ಈ ಕೆಳಗಿನವರು ಒಳಗಾಗಿದ್ದಾರೆ :—

೧. ಮಂಧಾನ್ ಸಾಬ್
೨. ಕೊಟ್ರಪ್ಪ
೩. ವೆಂಕಣ್ಣ
೪. ಮದನ್ ಸಾಬ್
೫. ಉಗ್ರಸೇನ್
೬. ಸಂಪ್ಪ ಹಿಂದಲಿ

ಇತ್ಯಾದಿ ಜನರು ಸೇರಿಕೊಂಡಿದ್ದಾರೆ. ೬ ವರ್ಷದ ಲಾಗಾಯಿತು ಈ ಸೊಸೈಟಿ ನಡೆಯುತ್ತಾ ಇಲ್ಲ. ಆಡಿಟರ್ ರಿಪೋರ್ಟು ಕೊಡುವಾಗ ಸಹ ನಿಧಾನವಾಗಿದೆ. ಆಡಿಟರ್ ಮೇಲೆಯೂ ಕ್ರಮ ತೆಗೆದುಕೊಂಡಿದ್ದೇವೆ. ಹಾಗೆಯೇ ಬಾಕಿಯವರ ಮೇಲೆ ಸಹ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಂ. ವಿರುಪಾಕ್ಷಪ್ಪ.—ಕ್ರಿಮಿನಲ್ ಪ್ರೊಸೀಡಿಂಗ್ಸ್ ಯಾವ ಸ್ಟೇಜಿನಲ್ಲಿ ಇದೆ ?

ಶ್ರೀ ಎ. ಶಂಕರ ಆಳ್ವ.—ರಿಕವರಿ ಹಾಕಿದ್ದಾರೆ ; ತನಿಖೆ ನಡೆಯುತ್ತಿದೆ ಮತ್ತು ಸೊಸೈಟಿಯನ್ನು ಲಿಕ್ವಿಡೇಟ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ.